





ನನ್ನ ನೆಚ್ಚಿನದ್ದು. ವನ್ಯಜೀವಿಗಳ ಮ್ಯಾಕ್ರೊ ಫೋಟೊಗ್ರಫಿ ತುಂಬಾ ಇಷ್ಟ. ಆದರೆ ಕೈಯಲ್ಲಿ ಕ್ಯಾಮೆರಾ ಇದ್ದರೆ ಯಾವುದೇ ವಸ್ತು, ಮನುಷ್ಯರ ಚಿತ್ರವನ್ನು ಕೂಡ ಉತ್ಸಾಹದಿಂದ ತೆಗೆಯಬಲ್ಲೆ. ವೆಡ್ಡಿಂಗ್ ಫೋಟೊಗ್ರಫಿ ಮಾಡುತ್ತೇನೆ. ಸ್ಟ್ರೀಟ್ ಹಾಗೂ ಟ್ರಾವೆಲ್ ಫೋಟೊಗ್ರಫಿ ಮೆಚ್ಚಿನ ಹವ್ಯಾಸ. ಫೋಟೊಗ್ರಫಿಯನ್ನು ವೃತ್ತಿಯಾಗಿ ತೆಗೆದುಕೊಳ್ಳಲು ನಿರ್ಧರಿಸಿದ ನಂತರ 'ಮೊಮೆಂಟೋಗ್ರಾಫರ್ಸ್' ಎಂಬ ಕಂಪನಿ ಹುಟ್ಟುಹಾಕಿದ್ದೇನೆ. ಇದುವರೆಗೂ ಸುಮಾರು ಮುನ್ನೂರು ಮದುವೆಗಳ ಛಾಯಾಗ್ರಹಣ ಮಾಡಲಾಗಿದೆ' ಎಂದು ಮಾಹಿತಿ ನೀಡುತ್ತಾರೆ.

## ಹುರುಪು ತಂದುಕೊಟ್ಟ ಪ್ರಶಸ್ತಿಗಳು

ಪ್ರಥಮೇಶ್ ಅವರಲ್ಲಿನ ಕ್ರಿಯಾಶೀಲತೆಯನ್ನು ಒರೆಗೆ ಹಚ್ಚಲು, ಅವರು ರೂಢಿಗತ ಫ್ರೇಮ್ ಅನ್ನು ಮೀರಿ ಅತ್ಯುತ್ತಮ ಛಾಯಾಚಿತ್ರ ತೆಗೆಯಲು 'ಕ್ರಿಯೇಟಿವ್ ನೇಚರ್ ಫೋಟೊಗ್ರಫಿ ಫೋರಂ' ವೇದಿಕೆ ಕಲ್ಪಿಸಿಕೊಟ್ಟಿತು. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುಮಾರು 20 ಪ್ರಶಸ್ತಿಗಳನ್ನು ಪಡೆದಿದ್ದು, ಈ ಪ್ರಶಸ್ತಿಗಳು ಇವರ ಹುರುಪನ್ನು ಹೆಚ್ಚಿಸಿವೆ. ಈಚೆಗೆ ನೇಚರ್ ಕನ್ಸರ್ವೆನ್ಸಿ ಮ್ಯಾಗಜೀನ್ ವೆಬ್ ಪುಟಕ್ಕೆ ಪ್ರಥಮೇಶ್ ಅವರ 'ದಿ ಮ್ಯಾಜಿಕ್ ಟ್ರೀ' ಚಿತ್ರವನ್ನು ಆರಿಸಲಾಗಿದೆ. ಸ್ಮಿತ್‌ಸೋನಿಯನ್ ಮ್ಯಾಗಜೀನ್‌ನ ಪ್ರತಿಷ್ಠಿತ ಫೋಟೊಗ್ರಫಿ ಸ್ಪರ್ಧೆಯ 'ನ್ಯಾಚುರಲ್ ವರ್ಲ್ಡ್' ವಿಭಾಗದಲ್ಲಿ ಆಯ್ಕೆಯಾದ ಹತ್ತು ಛಾಯಾಚಿತ್ರಗಳಲ್ಲಿ ಇವರ 'ಆಂಟ್ಸ್ ಆ್ಯಂಡ್ ಅಫಿಡ್ಸ್' ಕೂಡ ಒಂದಾಗಿದೆ.

## ಬಣ್ಣ ಸೃಷ್ಟಿಸುವ ಚಮತ್ಕಾರ

'ಪ್ರತಿಯೊಂದು ಬಾರಿ ಛಾಯಾಗ್ರಹಣಕ್ಕೆ ಹೊರಟಾಗಲೂ ಹೊಸ ಹೊಸ ಅನುಭವಗಳು ಆಗುತ್ತಿರುತ್ತವೆ. ಒಂದು ಚಿತ್ರವನ್ನು ಹೇಗೆ ಅತ್ಯುತ್ತಮವಾಗಿಸಬಹುದು ಎಂಬ ಪ್ರಯತ್ನದ ಪ್ರಕ್ರಿಯೆ ಸಾಕಷ್ಟು ಅಂಶಗಳನ್ನು ಕಲಿಸುತ್ತದೆ. ಆಗಲೇ ಹೊಸತನ ಹುಟ್ಟುವುದು. ಇದರೊಂದಿಗೆ, ಬೆಳಕಿನ ಸಂಯೋಜನೆಯಲ್ಲಿ ಹಲವು ತಂತ್ರಗಳನ್ನು ಬಳಸುತ್ತೇನೆ. ಬೆಳಕನ್ನು ಕ್ರಿಯಾಶೀಲವಾಗಿ ಉಪಯೋಗಿಸಿದರೆ ಒಂದೊಳ್ಳೆ ಚಿತ್ರ ಮೂಡಿಸಲು ಸಾಧ್ಯವಿದೆ. 'ನ್ಯಾಚುರಲ್ ಆರ್ಟಿಸ್ಟ್ರಿ' ಶೀರ್ಷಿಕೆಯ ಛಾಯಾಚಿತ್ರ ಕೂಡ ಇದೇ ಪ್ರಯತ್ನದಲ್ಲಿ ಮೂಡಿಬಂದಿದ್ದು. ಶಿಲೀಂಧ್ರದಿಂದ ಆವೃತವಾಗಿದ್ದ ಮರದ ಕೊಂಬೆಯೊಂದರ ಮೇಲೆ ನಡೆಯುತ್ತಿದ್ದ ಶಂಖು ಹುಳುವಿನ ಚಿತ್ರ ಹಲವರ ಮೆಚ್ಚುಗೆ ಗಳಿಸಿತು. ಈ ಚಿತ್ರ ಗೆಲ್ಲಲು ಪ್ರಮುಖ ಕಾರಣ ಅದರಲ್ಲಿನ ಬಣ್ಣಗಳು. ಶಿಲೀಂಧ್ರಗಳು ಬೀಜಕಗಳನ್ನು ಸೃಷ್ಟಿಸುವಲ್ಲಿ ಕ್ರಿಯಾಶೀಲವಾಗಿರುತ್ತವೆ. ಈ ಬೀಜಕಗಳನ್ನು ಒಂದು ಆಯಾಮದಲ್ಲಿ ನೋಡಿದಾಗ ಅವುಗಳಿಂದ ಅದ್ಭುತ ಬಣ್ಣಗಳು ಹೊರಹೊಮ್ಮುವುದು ಕಾಣುತ್ತದೆ. ಇದನ್ನು ನಾನು ಗಮನಿಸಿರಲಿಲ್ಲ. ಆದರೆ ಫ್ಲ್ಯಾಶ್ ಲೈಟ್‌ನಲ್ಲಿ ನೋಡಿದಾಗ, ಆ ಬಣ್ಣಗಳು ಅಚ್ಚರಿ ಮೂಡಿಸಿದವು. ತಿಳಿ ಬೆಳಕು ನೀಡಿ ತೆಗೆದ ಈ ಚಿತ್ರ ಮನ್ನಣೆ ಗಳಿಸಿತು' ಎಂದು ಹೆಮ್ಮೆಯಿಂದ ಹೇಳುತ್ತಾರೆ.

ಛಾಯಾಗ್ರಹಣಕ್ಕೆ ಅರ್ಥಪೂರ್ಣ ಉದ್ದೇಶವೂ ಜೊತೆಗೂಡಬೇಕು ಎನ್ನುವ ಪ್ರಥಮೇಶ್ ಅವರದ್ದು ಛಾಯಾಗ್ರಹಣದ ಮೂಲಕ ಪ್ರಕೃತಿ ಸಂರಕ್ಷಣೆ ಮಾಡುವ ಪ್ರಯತ್ನ. ಪ್ರಕೃತಿ ಹಾಗೂ ವನ್ಯಜೀವಿಗಳ ಕುರಿತಂತೆ ಸಿನಿಮಾ ತೆಗೆಯುವ ಬಯಕೆ ಅವರಿಗಿದೆ. 'ನನ್ನ ಈ ಒಂದು ಪ್ರಯತ್ನ ಸಣ್ಣ ಬದಲಾವಣೆ ತಂದರೂ ಅದು ನನ್ನ ಯಶಸ್ಸೆಂದೇ ಭಾವಿಸುತ್ತೇನೆ. ಒಬ್ಬ ಛಾಯಾಗ್ರಾಹಕ ಇದಕ್ಕಿಂತ ಹೆಚ್ಚಿನದೇನನ್ನು ಬಯಸಲು ಸಾಧ್ಯ' ಎಂದು ತಮ್ಮ ಗುರಿಯನ್ನು ವ್ಯಕ್ತಪಡಿಸುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in